Ref.No.52/2022

MW-1,

# Before the Industrial Tribunal, Mysuru

## Ref No.52/2022

| | |
|---|---|
| **Name** | **: Smt.Vidya V. Bhandarkar.** |
| **Husband Name** | **: B.Prabhakar** |
| **Age** | **: 59 Years.** |
| **Designation** | **: Establishment Supervisor** |
| **Address** | **: KSRTC, Mangalore** |

**ದಿನಾಂಕಃ 25.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**2 ನೇ ಪಾರ್ಟಿ ಪರವಾಗಿಃ ಶ್ರೀ VKS ವಕೀಲರಿಂದ ಪ್ರತಿನಿಧಿಯಿಂದ ಮುಖ್ಯ ವಿಚಾರಣೆಃ**

ನಾನು 2014 ರಿಂದ Establishment Supervisor ಆಗಿ ಕೆ.ಎಸ್.ಆರ್.ಟಿ.ಸಿ ಮಂಗಳೂರು ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನನಗೆ ರಾಮಕೃಷ್ಣ ಡಿ. ಶಾನ್ಭೋಗ್ ರವರ ಮೇಲೆ ನಡೆದಂತಹ ವಿಚಾರಣೆಯ ಬಗ್ಗೆ ಗೊತ್ತಿರುತ್ತದೆ. ಸಾಕ್ಷಿದಾರರಿಗೆ 1 ದಾಖಲಾತಿಯನ್ನು ತೋರಿಸಲಾಗಿ, ಸಾಕ್ಷಿದಾರರು ಅದು 1 ನೇ ಪಾರ್ಟಿಯವರಿಗೆ ನೀಡಿದ ಕಾರಣ ಕೇಳಿ ಸೂಚನಾ ಪತ್ರ ಆಗಿರುತ್ತದೆ ಎಂದು ಗುರುತಿಸಿ ನುಡಿಯುತ್ತಾರೆ. ಸದರಿ ದಾಖಲೆಯನ್ನು ನಿಎಂ-31 ಎಂದು ಗುರುತಿಸಲಾಯಿತು. ಸಾಕ್ಷಿದಾರರಿಗೆ ದಿಃ16.06.2020 ರಂದು ಕವಿತಾ ಎಸ್. ಮುನ್ನೀಕೇರಿ ಅವರ ಸ್ವಯಂ ಪರೀಶೀಲನಾ ವರದಿಗಳನ್ನು ತೋರಿಸಲಾಗಿ, ಸಾಕ್ಷಿದಾರರು ದಾಖಲೆಯನ್ನು ಗುರುತಿಸಿರುತ್ತಾರೆ, ಅದನ್ನು ನಿಎಂ-32 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ- 1 ನೇ ಪಾರ್ಟಿ ಪರವಾಗಿಃ ಶ್ರೀಮತಿ.LCH ವಕೀಲರಿಂದ**

ನಿಎಂ-31 ಮತ್ತು 32 ರ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನಿಎಂ-31 1 ನೇ ಪಕ್ಷಗಾರರಿಗೆ ಜಾರಿಯಾಗಿರುವುದರ ಬಗ್ಗೆ ನಾನು ಯಾವುದೇ ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ನಿಎಂ-31 1 ನೇ ಪಕ್ಷಗಾರರಿಗೆ ಜಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಎಂ-32 ನ್ನು ಮಾಡಿರುವ ಪ್ರಾಧಿಕಾರವು ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿಯವ ಯಾವ ಇಲಾಖೆಯಲ್ಲಿ ಈಗ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದು ತಿಳಿದುಕೊಳ್ಳುವ ಪ್ರಯತ್ನ ನಾನು

Ref.No.52/2022

MW-1,

ಮಾಡಿರುವುದಿಲ್ಲ. ನಮ್ಮ ಸಂಸ್ಥೆಯ ಕೆಲಸಗಾರರ ವಿರುದ್ಧ ಶಿಕ್ಷಾದೇಶವನ್ನು ನಮ್ಮ ಸಂಸ್ಥೆಯ ಸಿ ಅಂಡ್ ಡಿ ರೆಗ್ಯೂಲೇಷನ್ಸ್ ಅನ್ವಯ ಮಾಡಬೇಕು ಎಂದರೆ ಸರಿ. 1 ನೇ ಪಕ್ಷಗಾರರಿಗೆ ನೀಡಿದ ಶಿಕ್ಷೆ ಲಘು ಶಿಕ್ಷೆ ಎಂದರೆ ಸರಿ. ಲಘು ಶಿಕ್ಷೆ ವಿಧಿಸಿದ ಸಂಧರ್ಭದಲ್ಲಿ ನಿಎಂ-32 ರಂತೆ ಸ್ವಯಂ ಪರಿಶೀಲನೆ ಮಾಡುವಂತಹ ಕ್ರಮ ಇರುವುದಿಲ್ಲ ಎಂದರೆ ಸರಿಯಲ್ಲ. ನಿಎಂ-32 ಕಾನೂನು ಬಾಹಿರವಾಗಿರುತ್ತದೆ ಎಂದರೆ ಸರಿಯಲ್ಲ. ನಿಎಂ-32 ಪ್ರಾಕೃತಿಕ ನ್ಯಾಯತತ್ವಕ್ಕೆ ವಿರುದ್ಧವಾಗಿರುತ್ತದೆ ಎಂದರೆ ಸರಿಯಲ್ಲ. ನಿಎಂ-32 ಆದೇಶವನ್ನು ಹೊರಡಿಸುವ ಮೊದಲು 1 ನೇ ಪಕ್ಷಕಾರರಿಗೆ ತಮ್ಮ ರಕ್ಷಣೆ ಮಾಡುವ ಯಾವುದೇ ಅವಕಾಶ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)
(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ ರಾವ್ ಪಿ.),
ಅಧ್ಯಕ್ಷಾಧಿಕಾರಿಗಳು,
ಔದ್ಯಮಿಕ ನ್ಯಾಯಾಧೀಕರಣ,
ಮೈಸೂರು.